# ಮನವಿ

**ಮಾನ್ಯರೇ,**

ಸಂಸ್ಕೃತ, ಕನ್ನಡ ಸಾಹಿತ್ಯಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿರುವ ಶ್ರೀ ಎನ್. ರಂಗನಾಥಶರ್ಮಾ ಅವರು ಸಾರಸ್ವತಕ್ಷೇತ್ರದಲ್ಲಿ ಮಾಡುತ್ತಿರುವ ಕಾರ್ಯ ಅಮೋಘವಾದುದು. ಅವರ ವಿನಯ, ಸೌಜನ್ಯ, ಸಹೃದಯತೆಗಳು ಅವರ ಪಾಂಡಿತ್ಯಕ್ಕೆ ಭೂಷಣಗಳಾಗಿವೆ.

ಬೆಂಗಳೂರು ಮತ್ತು ಮೈಸೂರಿನ ಸಂಸ್ಕೃತ ಕಾಲೇಜುಗಳಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿ ಅವರು ಅನೇಕ ಮಂದಿ ಶಿಷ್ಯರನ್ನು ತಯಾರು ಮಾಡಿದ್ದಾರೆ. ಸುಮಾರು ಒಂದು ಶತಮಾನದ ಹಿಂದೆ ಪ್ರಕಟವಾಗಿದ್ದು,ದುರ್ಲಭವಾಗಿದ್ದ ಶ್ರೀ ಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣವನ್ನು ಪರಿಷ್ಕರಿಸುವುದರಲ್ಲಿ ಅವರು ಮುಖ್ಯಪಾತ್ರವನ್ನು ವಹಿಸಿದರು. ಶ್ರೀಮದ್ವಾಲ್ಮೀಕಿ ರಾಮಾಯಣದ ಅವರ ಅನುವಾದ ಬಹುಜನಾದರಣೀಯವಾಗಿದೆ. ಲೌಕಿಕನ್ಯಾಯಗಳು, ಹೊಸಗನ್ನಡ ವ್ಯಾಕರಣ, ಸೂಕ್ತಿ–ವ್ಯಾಪ್ತಿ ಮೊದಲಾದ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿರುವ ಶ್ರೀ ರಂಗನಾಥಶರ್ಮಾ ಅವರು ವಿಷ್ಣುಪುರಾಣ, ಶ್ರೀಮದ್ಭಾಗವತದ ಕೊನೆಯ ಮೂರು ಸ್ಕಂದಗಳನ್ನು ಸೊಗಸಾಗಿ ಅನುವಾದಮಾಡಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ; ಅಮರಕೋಶವನ್ನು ಸಂಪಾದಿಸಿ ಕನ್ನಡದಲ್ಲಿ ತಂದಿದ್ದಾರೆ; ಸಂಸ್ಕೃತದಲ್ಲಿ ಬಾಹುಬಲಿವಿಜಯಂ, ಏಕಚಕ್ರಂ ಎಂಬ ನಾಟಕಗಳನ್ನು ಬರೆದಿದ್ದಾರೆ ಮತ್ತು ಗೊಮ್ಮಟೇಶ್ವರ ಸುಪ್ರಭಾತ, ಸುಬ್ರಹ್ಮಣ್ಯ ಸುಪ್ರಭಾತ, ರಾಮಚಂದ್ರ ಸುಪ್ರಭಾತ ಕೃತಿಗಳನ್ನು ರಚಿಸಿ ವಿದ್ವಜ್ಜನರಿಗೆ ಆದರಣೀಯರಾಗಿದ್ದಾರೆ.

ಅನೇಕ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿರುವ, ಆಗುತ್ತಿರುವ ಅವರ ಲೇಖನಗಳು ಅವರ ಆರೋಗ್ಯಕರ ಅಧ್ಯಾಪನಕ್ರಮ ಮತ್ತು ಚಿಂತನಶೀಲ ಹಾಗೂ ಮಾರ್ಗದರ್ಶಕ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ವ್ಯಾಕರಣ, ವೇದಾಂತ, ಕಾವ್ಯಮೀಮಾಂಸೆ ಮೊದಲಾದ ಶಾಸ್ತ್ರಗಳಲ್ಲಿ ಅವರಿಗಿರುವ ನಿಷ್ಕೃಷ್ಟ, ವಿಶಾಲವ್ಯಾಪ್ತಿಯ ಜ್ಞಾನ, ಸಾಹಿತ್ಯದಲ್ಲಿರುವ ಸಹೃದಯತೆ ಅವರ ಉಪನ್ಯಾಸಗಳಲ್ಲಿ ಪ್ರತಿಬಿಂಬಿತವಾಗಿವೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಾಚೀನ ಕನ್ನಡ ಕಾವ್ಯಗಳನ್ನು ಹೊಸಗನ್ನಡಕ್ಕೆ ತರುವ ಯೋಜನೆಯ ನಿರ್ದೇಶಕರಾಗಿದ್ದು ಆ ಗ್ರಂಥಗಳು ಇಂದಿನವರಿಗೆ ಎಟಕುವಂತೆ ಮಾಡಿದ್ದಾರೆ. ಉತ್ಥಾನ ಪತ್ರಿಕೆಯಲ್ಲಿ 'ಸೂಕ್ತಿ ವ್ಯಾಪ್ತಿ' ಎಂಬ ಶೀರ್ಷಿಕೆಯಲ್ಲಿ ಸಮಕಾಲೀನ ವಿಷಯಗಳನ್ನು ಆರ್ಷೇಯ ಮತ್ತು ಮಹಾಕವಿಸೂಕ್ತಿಗಳ ಬೆಳಕಿನಲ್ಲಿ ಸಮೀಕ್ಷಿಸಿದ್ದಾರೆ.

1974 ರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಇವರನ್ನು ಗೌರವಿಸಿವೆ. 1984 ರಲ್ಲಿ ಅವರು ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಭಾರತೀಯ ವಿದ್ಯಾಭವನ, ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಶ್ರೀರಾಮಕೃಷ್ಣಾಶ್ರಮ ಮುಂತಾದ ಸಂಸ್ಥೆಗಳು ಅವರ ವಿದ್ವತ್ತಿನ ಲಾಭವನ್ನು ಪಡೆಯುತ್ತಿವೆ.

ಇಂತಹ ಮಹನೀಯರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವೆಂಬ ದೃಷ್ಟಿಯಿಂದ ಶ್ರೀ ರಂಗನಾಥಶರ್ಮಾ ಅವರ ಶಿಷ್ಯರೂ, ಅಭಿಮಾನಿಗಳೂ ಮತ್ತು ಗಣ್ಯರೂ ಸೇರಿದ ಸಮಿತಿಯೊಂದು ಕಾರ್ಯಪ್ರವೃತ್ತವಾಗಿದೆ.

ಶ್ರೀ ರಂಗನಾಥಶರ್ಮಾ ಅವರಿಗೆ ಸನ್ಮಾನ ಸಮಾರಂಭ ಮತ್ತು ಅವರ ಕೃತಿಗಳನ್ನು ಕುರಿತ ವಿಚಾರಸಂಕಿರಣದ ಜೊತೆಗೆ, ಅಭಿನಂದನ ಗ್ರಂಥವೊಂದನ್ನು ಸಮರ್ಪಿಸುವ ಉದ್ದೇಶವಿದೆ. ಅವರ ಅನೇಕ ವರ್ಷಗಳ ಅಧ್ಯಯನ, ಅಧ್ಯಾಪನ, ಪ್ರವಚನಗಳ ಫಲವಾಗಿರುವ ಹಲವಾರು ಗ್ರಂಥಗಳು ಇನ್ನೂ ಹಸ್ತಪ್ರತಿಯ ರೂಪದಲ್ಲೇ ಇವೆ. ಅವುಗಳನ್ನೂ ಪ್ರಕಟಣೆ ಮಾಡಬೇಕೆಂಬ ಯೋಜನೆ ಇದೆ. ಈ ಎಲ್ಲ ಕಾರ್ಯಗಳನ್ನು ಏಪ್ರಿಲ್ 1992 ರ ವೇಳೆಗೆ ನಡೆಸಬೇಕೆಂಬ ಸಂಕಲ್ಪವಿದೆ.

ಶ್ರೀ ರಂಗನಾಥಶರ್ಮಾ ಅವರ ಅಭಿಮಾನಿಗಳಾದ ತಾವು ಅಭಿನಂದನ ಸಮಿತಿಯಲ್ಲಿದ್ದು ಈ ಯೋಜನೆಗಳನ್ನು ಆಗಮಾಡಿಸಿಕೊಡಬೇಕಾಗಿ ಕೋರುತ್ತೇವೆ.

## ಅಭಿನಂದನ ಸಮಿತಿಯ ಸದಸ್ಯತ್ವದ ವಿವರ ಹೀಗಿದೆ:

| | | |
|---|---|---|
| ಮಹಾಪೋಷಕರು | – | ರೂ 5000/-ಕ್ಕೆ ಮೇಲ್ಪಟ್ಟು ಕೊಡುಗೆ |
| ಪೋಷಕರು | – | ರೂ 2500/-ಕ್ಕೆ ಮೇಲ್ಪಟ್ಟು ಕೊಡುಗೆ |
| ದಾತೃಗಳು | – | ರೂ 1500/-ಕ್ಕೆ ಮೇಲ್ಪಟ್ಟು ಕೊಡುಗೆ |
| ಸದಸ್ಯರು | – | ರೂ 150/-ಕ್ಕೆ ಮೇಲ್ಪಟ್ಟು ಕೊಡುಗೆ |

ಸಮಿತಿಯ ಸದಸ್ಯರೆಲ್ಲರಿಗೂ ಅಭಿನಂದನ ಗ್ರಂಥದ ಗೌರವ ಪ್ರತಿಯೊಂದನ್ನು ನೀಡಲಾಗುವುದು. ಮೊದಲ ಮೂರು ವರ್ಗದ ಮಹನೀಯರಿಗೆ ಸಮಿತಿಯ ಇತರ ಪ್ರಕಟಣೆಗಳ ಗೌರವ ಪ್ರತಿಗಳನ್ನು ನೀಡಲಾಗುವುದು. ಶ್ರೀ ರಂಗನಾಥಶರ್ಮಾ ಅವರ ಅಭಿಮಾನಿಗಳಾದ ತಾವು ಅಭಿನಂದನ ಸಮಿತಿಯಲ್ಲಿದ್ದು ಈ ಯೋಜನೆಗಳನ್ನು ಆಗಮಾಡಿಸಿಕೊಡಬೇಕಾಗಿ ಕೋರುತ್ತೇವೆ.

ಯಥಾಶಕ್ತಿ ಕೊಡುವ ಧನಸಹಾಯವನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗುವುದು.ತಮ್ಮ ಕೊಡುಗೆಯನ್ನು 'ಎನ್.ರಂಗನಾಥಶರ್ಮಾ ಅಭಿನಂದನ ಸಮಿತಿ' ಯ ಹೆಸರಿಗೆ ಕೆಳಕಂಡ ಯಾವುದಾದರೊಂದು ವಿಳಾಸಕ್ಕೆ ಕಳುಹಿಸಕೊಡಬೇಕಾಗಿ ವಿನಂತಿ.ಪರಸ್ಥಳದ ಚೆಕ್‌ಗಳಿಗೆ ವಸೂಲಿ ಶುಲ್ಕವನ್ನು ದಯಮಾಡಿ ಸೇರಿಸಿ ಕೊಡಿ.

ಶ್ರೀ ಡಿ.ಆರ್. ವೆಂಕಟರಮಣನ್,
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ,
ನರಸಿಂಹರಾಜಾ ಕಾಲೊನಿ,
ಬೆಂಗಳೂರು 560 019.

ಶ್ರೀ ಬಿ.ವಿ.ಶ್ರೀನಾಥಶಾಸ್ತ್ರೀ
44 ಸದ್ಗುರುಮಂದಿರ
ರಂಗರಾವ್‌ರಸ್ತೆ, ಶಂಕರಪುರ,
ಬೆಂಗಳೂರು 560 004

ಅಧ್ಯಕ್ಷರು ಮತ್ತು ಸದಸ್ಯರು, ಕಾರ್ಯಸಮಿತಿ.
ವಿದ್ವಾನ್ ಶ್ರೀ ಎನ್. ರಂಗನಾಥಶರ್ಮಾ ಅಭಿನಂದನ ಸಮಿತಿ,
C/o ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ನರಸಿಂಹರಾಜಾ ಕಾಲೊನಿ,ಬೆಂಗಳೂರು – 560 019
ದೂರವಾಣಿ : 602436